೨. ೧೯೯೬-೯೦ರಲ್ಲಿ ಸದರಿ ಸ್ಥಳದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾನಿಲಯದ ಸಂಯೋಜನೆಗೆ ಅರ್ಜಿ ಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಬರೆಯಲಾಗಿದೆ.

## ಮಾನುಗಾರಿಕೆಯಿಂದ ಬರುತ್ತಿರುವ ಆದಾಯದ ಬಗ್ಗೆ

೨೪೫೫. ಶ್ರೀ ವಸಂತ ವಿ ಸಾಲಿಯಾನ (ಬೆಳ್ತಂಗಡಿ).— ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಮಾನುಗಾರಿಕೆಯ ವಿವಿಧ ಕಾರ್ಯಕ್ರಮಗಳಿಂದ ಬರುತ್ತಿರುವ ವಾರ್ಷಿಕ ವಿವಿಧ ಆದಾಯದ ಅಂದಾಜು ಮೊತ್ತವೆಷ್ಟು ?

ಆ) ಸರ್ಕಾರವು ಮಾನುಗಾರಿಕೆಯ ಪ್ರಮುಖ ಅಭಿವೃದ್ಧಿ ಕಾರ್ಯಗಳಿಗಾಗಿ ವಿಚ್ರ್ಯು ಮಾಡುತ್ತಿರುವ ಹಣದ ಮೊತ್ತವೆಷ್ಟು ?

ಇ) ಮಂಗಳೂರು ಫಿಶರೀಸ್ ಕಾಲೇಜಿನಲ್ಲಿ ಮಾನುಗಾರರ ಮಕ್ಕಳಿಗೆ ಶಿಕ್ಷಣದಲ್ಲಿ ಆದ್ಯತೆ ನೀಡಲಾಗಿದೆಯೇ ?

ಶ್ರೀ ಎಂ. ರಘುಪತಿ (ಮಾನುಗಾರಿಕೆ ಮಂತ್ರಿ ಬಂದರು ಸಚಿವರು).—

ಅ) ೧೯೮೭-೮೮ನೇ ಸಾಲಿಗೆ ರಾಜ್ಯ ಸರ್ಕಾರಕ್ಕೆ ಮಾನುಗಾರಿಕೆಯ ವಿವಿಧ ಕಾರ್ಯಕ್ರಮಗಳಿಂದ ಬಂದಿರುವ ವಿವಿಧ ಆದಾಯದ ಮೊತ್ತ ರೂ. ೭೬.೦೦ ಲಕ್ಷ.

ಆ. ೧೯೮೭-೮೮ನೇ ಸಾಲಿಗೆ ಸರ್ಕಾರ ಮಾನುಗಾರಿಕೆಯ ಪ್ರಮುಖ ಅಭಿವೃದ್ಧಿ ಕಾರ್ಯಗಳಿಗಾಗಿ ವಿಚ್ರ್ಯು ಮಾಡಿರುವ ಹಣದ ಮೊತ್ತ ರೂ. ೩೫೮.೫೦ ಲಕ್ಷ.

ಇ) ಇಲ್ಲ.

## ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ

೨೧೮೪. ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಶಾಲೆಗಳಲ್ಲಿ ಖಾಲಿಯಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಇ) ಕಳೆದ ಮೂರು ವರ್ಷಗಳಲ್ಲಿ ಸದರೀ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ೪೯೦೭ (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಇ) ಈಗಾಗಲೇ ಜಿಲ್ಲಾ ನೇಮಕಾತಿ ಸಮಿತಿಗಳನ್ನು ರಚಿಸಿ, ಸದರೀ ಸಮಿತಿಗಳು ಶಿಕ್ಷಕರ ಖಾಲೀ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಅರ್ಜಿಗಳ ಪರಿಶೀಲನಾ ಕಾರ್ಯವೂ ನಡೆದಿದೆ. ಸದರೀ ಖಾಲೀ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಜಿಲ್ಲಾ ನೇಮಕಾತಿ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಹುದ್ದೆಗಳ ಜಿಲ್ಲಾವಾರು ವಿವರಗಳು

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|
| ೧ | ೨ | ೩ |
| ೧ | ಬೆಂಗಳೂರು ಗ್ರಾ. ಜಿಲ್ಲೆ | ೩೧೦ |
| ೨ | ಬೆಂಗಳೂರು ದಕ್ಷಿಣ ಜಿಲ್ಲೆ | — |
| ೩ | ಚಿತ್ರದುರ್ಗ | ೨೨೪ |
| ೪ | ಕೋಲಾರ | ೩೦೦ |
| ೫ | ಶಿವಮೊಗ್ಗ | ೨೫೫ |
| ೬ | ತುಮಕೂರು | ೩೪೨ |
| ೭ | ಮೈಸೂರು | ೩೫೫ |
| ೮ | ಮಂಡ್ಯ | ೩೨೬ |
| ೯ | ದಕ್ಷಿಣ ಕನ್ನಡ | ೧೫೦ |
| ೧೦ | ಹಾಸನ | ೨೨೦ |
| ೧೧ | ಚಿಕ್ಕಮಗಳೂರು | ೨೦೦ |
| ೧೨ | ಕೊಡಗು | ೮೬ |
| ೧೩ | ಬೆಳಗಾಂ | ೩೭೪ |
| ೧೪ | ಬಿಜಾಪುರ | ೩೧೬ |
| ೧೫ | ಧಾರವಾಡ | ೪೧೦ |
| ೧೬ | ಉತ್ತರ ಕನ್ನಡ | ೧೪೬ |
| ೧೭ | ಗುಲ್ಬರ್ಗಾ | ೨೧೨ |
| ೧೮ | ರಾಯಚೂರು | ೨೫೬ |
| ೧೯ | ಬಳ್ಳಾರಿ | ೧೬೧ |
| ೨೦ | ಬೀದರ್ | ೧೬೦ |
| ೨೧ | ಬೆಂಗಳೂರು ಉತ್ತರ | — |
| | ಒಟ್ಟು | ೪೮೦೭ |

## ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ

೧೭೬೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರುಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮ ಕೈಗೊಳ್ಳಲಿದೆಯೇ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಈಗಾಗಲೇ ಜಿಲ್ಲಾ ಆಯ್ಕೆ ಸಮಿತಿಗಳನ್ನು ರಚಿಸಲಾಗಿದೆ, ಸಮಿತಿಗಳು ಅರ್ಜಿಗಳನ್ನು ಕರೆದು ಅರ್ಜಿಗಳ ಪರಿಶೀಲನಾ ಕಾರ್ಯವು ನಡೆದಿದೆ. ಕೂಡಲೇ ಸಂದರ್ಶನಗಳನ್ನು ನಡೆಸಿ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ.